ದಿನಾಂಕ 15-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ**

6. ನನ್ನ ಸೋದರ ಮಾವನ ಹೆಸರು ಸುರೇಶ ಎಂದರೆ ಸರಿ. ಆತನ ಮೊದಲನೇ ಹೆಂಡತಿ ಹೆಸರು ಶಾಂತಮ್ಮ. ಆಕೆಯು ಜೀವಿತ ಇದ್ದಾಳೋ ಅಥವಾ ಇಲ್ಲವೋ ನನಗೆ ಅಷ್ಟಾಗಿ ಗೊತ್ತಿಲ್ಲ. 4 ನೇ ಪ್ರತಿವಾದಿಯಾದ ಶಾಂತವ್ವ ಮತ್ತು ಆಕೆಯ ಗಂಡ ಸುರೇಶ ಒಟ್ಟಿಗೆ ಸಾಂಸಾರಿಕ ಜೀವನ ಮಾಡುತ್ತಿರುವುದಿಲ್ಲ. 4 ನೇ ಪ್ರತಿವಾದಿಯು ಸುರೇಶನನ್ನು ಬಿಟ್ಟು ಹೋಗಿದ್ದರಿಂದ ಸುರೇಶ ರವರು 2 ನೇ ಮದುವೆಯನ್ನು ಆಗಿರುತ್ತಾನೆ ಎಂದರೆ ಗೊತ್ತಿಲ್ಲ. ಶಂಕ್ರವ್ವ ಎಂಬುವವರು ಸುರೇಶನ 2 ನೇ ಹೆಂಡತಿ ಎಂದರೆ ಗೊತ್ತಿಲ್ಲ.

7. ನನ್ನ ತಾಯಿ ಗೌರಮ್ಮರವರು 2007 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯ ತವರು ಮನೆಯ ಅಡ್ಡ ಹೆಸರು ಅರಳೇಶ್ವರ. ನನ್ನೊಂದಿಗೆ ನನ್ನ ತಾಯಿ ಮತ್ತು ತಾಯಿಯ ತಾಯಿ ಸಹ ತಾಯಿಯ ತವರು ಮನೆಯಲ್ಲಿಯೇ ಒಟ್ಟಿಗೆ ವಾಸವಿದ್ದೆವು. ಈ ದಾವೆಯು ದಾಖಲಾದ ನಂತರ ದಾಖಲೆಗಳನ್ನು ತೆಗೆಸಿ ನೋಡಿರುವುದಿಲ್ಲ. ನನ್ನ ತಾಯಿ ಮರಣ ಹೊಂದಿದಾಗ ನನಗೆ 15 ಅಥವಾ 16 ವರ್ಷ ವಯಸ್ಸಾಗಿತ್ತು. ಆಗ ನಾನು ಮತ್ತು 1 ನೇ ವಾದಿಯು ಅಪ್ರಾಪ್ತರು ಇದ್ದೆವು ಎಂದರೆ ಸರಿ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನನ್ನು ಮತ್ತು 1 ನೇ ವಾದಿಯನ್ನು ನನ್ನ ತಾಯಿಯ ತಾಯಿ ಜೋಪಾನ ಮಾಡಿರುತ್ತಾರೆ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ಮಾವ ಸುರೇಶ ರವರೇ ನನ್ನನ್ನು ಮತ್ತು 1 ನೇ ವಾದಿಯನ್ನು ನೋಡಿಕೊಂಡಿದ್ದು, ನಮ್ಮ ಮದುವೆಗಳನ್ನು ಆತನೇ ನೆರವೇರಿಸಿರುತ್ತಾನೆ ಎಂದರೆ ಸರಿಯಲ್ಲ.

8. ನನ್ನ ತಾಯಿ ಮರಣ ಹೊಂದಿದ ನಂತರ ಪಿತ್ರಾರ್ಜಿತ ಆಸ್ತಿಗಳಾದ ಪ್ರಸ್ತುತದ ದಾವಾ ಆಸ್ತಿಗಳ ಮೇಲೆ ಹಿಸ್ಸೇಯನ್ನು ಕೋರಿ ನಾನು ಮತ್ತು 1 ನೇ ವಾದಿಯು ಅಪ್ರಾಪ್ತರು ಇದ್ದರಿಂದ ನಮ್ಮ ಪರವಾಗಿ ಸುರೇಶ ರವರು ಈ ಹಿಂದೆ ಅಸಲು ದಾವಾ ಸಂಃ 148/2009 ರಂತೆ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ನಮ್ಮ ಪರವಾಗಿ ಅಲ್ಪಸಂರಕ್ಷಣಾದಾರ ನಾದ ಸುರೇಶರವರು ರಾಜೀ ಮಾಡಿಕೊಂಡಿದ್ದರಿಂದ ರಾಜಿಡಿಕ್ರಿ ಆಗಿತ್ತು ಎಂದರೆ ಗೊತ್ತಿಲ್ಲ. ನಮಗೆ ಇದ್ದ ಹಿಸ್ಸೇಯ ಹಕ್ಕಿನ ಬದಲಾಗಿ ಸದರಿ ಪ್ರಕರಣದಲ್ಲಿ ಆದ ರಾಜಿಡಿಕ್ರಿಯಂತೆ ನನ್ನ ತಂದೆ 1 ನೇ ಪ್ರತಿವಾದಿಯು ರೂ.75,000/- ಹಣವನ್ನು ನಮಗೆ ನೀಡಿದ್ದರು ಎಂದರೆ ಸರಿಯಲ್ಲ.

9. ನನ್ನ ತಾಯಿಯ ತಾಯಿ ಹೆಸರು ಕಮಲಮ್ಮ ಮತ್ತು ಆಕೆಯು ಇನ್ನೂ ಜೀವಂತ ಇದ್ದಾಳೆ. ನನ್ನ ತಾಯಿಗೆ ಸುರೇಶ ರವರು ಮಾತ್ರ ಒಬ್ಬನೇ ಸಹೋದರ ಮತ್ತು ಗಂಗಮ್ಮ ಎಂಬ ಒಬ್ಬಳೇ ಸಹೋದರಿ. ಗಂಗಮ್ಮ ರವರನ್ನು ಬಾಳೆಹಳ್ಳಿಯ ವರನಿಗೆ ಮದುವೆ ಮಾಡಿಕೊಡಲಾಗಿದ್ದು, ಆಕೆಯು ಅಲ್ಲಿಯೇ ವಾಸವಿದ್ದಾಳೆ. ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ಅಸಲು ದಾವಾ ಸಂಃ 148/2009 ರ ರಾಜಿ ಡಿಕ್ರಿಯನ್ನು ತೆಗೆಯಿಸಿ ನೋಡಿರುವುದಿಲ್ಲ. ಸದರಿ ರಾಜಿ ಡಿಕ್ರಿಯನ್ನು ನಾನು ಇದುವರೆಗೂ ಪ್ರಶ್ನೆ ಮಾಡಿರುವುದಿಲ್ಲ. ಸದರಿ ದಾವೆಯಲ್ಲಿ ಆದ ರಾಜಿ ಡಿಕ್ರಿಯ ಬಗ್ಗೆ ನನಗೆ ಗೊತ್ತಿಲ್ಲದೇ ಇರುವುದರಿಂದ ಅದನ್ನು ಪ್ರಶ್ನೆ ಮಾಡಿರಲಿಲ್ಲ. ಸದರಿ ರಾಜೀ ಡಿಕ್ರಿಯ ಬಗ್ಗೆ ನನಗೆ ಇಂದು ಮೇಲಿನಂತೆ ಪ್ರಶ್ನೆಗಳನ್ನು ಮಾಡಿದ್ದರಿಂದ ಮೊದಲ ಬಾರಿಗೆ ಗೊತ್ತಾಗಿರುತ್ತದೆ.

10. ನನ್ನ ಮತ್ತು 1 ನೇ ವಾದಿಯ ಸಂಪೂರ್ಣ ವಿದ್ಯಾಭ್ಯಾಸದ ಖರ್ಚು ಹಾಗೂ ಮದುವೆಯ ಖರ್ಚುಗಳು ಮತ್ತು ದಿನನಿತ್ಯದ ಅವಶ್ಯಕತೆಗಳನ್ನು ನನ್ನ ತಂದೆ ಸದರಿ ರಾಜಿ ಡಿಕ್ರಿಯಲಿ ನೀಡಿದ ರೂ.75000/- ಹಣದಿಂದ ಉಪಯೋಗಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯೇ ನಮ್ಮನ್ನು ಜೋಪಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ದುರುದ್ದೇಶದಿಂದ ಹಿಸ್ಸೇಯನ್ನು ಪಡೆಯಲು ಸದರಿ ಹಿಂದಿನ ರಾಜೀ ಡಿಕ್ರಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ದಾವಾ ಶೆಡ್ಯೂಲ್ ಬಿ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿಯೇ ಇರುತ್ತವೆ. ದಾವಾ ಶೆಡ್ಯೂಲ್ ಬಿ ಆಸ್ತಿಗಳ ದಾಖಲೆಗಳನ್ನು ಈ ದಾವೆಯನ್ನು ದಾಖಲಿಸುವ ಸಮಯದಲ್ಲಿ ನೋಡಿರುತ್ತೇನೆ. ಸಾಕ್ಷಿಗೆ ದಾವಾ ಶೆಡ್ಯೂಲ್ ಬಿ(1) ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ತೋರಿಸಿ ಅದು ಶಾರದಾ ವೀರಭದ್ರಪ್ಪ ಕೊಪ್ಪದ ರವರ ಹೆಸರಿನಲ್ಲಿ ಇದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಾವಾ ಶೆಡ್ಯೂಲ್ ಬಿ(2) ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ತೋರಿಸಿ ಅದು ಶಾರದಾ ವೀರಭದ್ರಪ್ಪ ಕೊಪ್ಪದ ರವರ ಹೆಸರಿನಲ್ಲಿ ಇದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ನೋಡಿದಾಗ ಅವುಗಳು ನನ್ನ ತಂದೆಯ ಹೆಸರಿನಲ್ಲಿದ್ದವು ಎಂದು ನುಡಿಯುತ್ತಾರೆ.

12. ಶಾರದಾ ವೀರಭದ್ರಪ್ಪ ಕೊಪ್ಪದರವರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ತಂದೆ 1 ನೇ ಪ್ರತಿವಾದಿಯು ಶಾರದಾ ಕೊಪ್ಪದ ರವರನ್ನು 2 ನೇ ಮದುವೆ ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ಶಾರದಾ ಕೊಪ್ಪದ ರವರು 1 ನೇ ಪ್ರತಿವಾದಿಯ 2 ನೇ ಹೆಂಡತಿ ಎಂದರೆ ಸಾಕ್ಷಿಯು ನನ್ನ ತಂದೆ ಆಕೆಯನ್ನು

ಮದುವೆ ಆದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಮತ್ತು ಶಾರದಾ ಕೊಪ್ಪದ ರವರ ಸಾಂಸಾರಿಕ ಜೀವನದಿಂದ ಪ್ರಿಯಾಂಕ, ಪ್ರಮೋದಾ, ರಂಗನಾಥ ಮತ್ತು ರಂಜಿತಾ ಎಂಬ 4 ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅವರು 1 ನೇ ಪ್ರತಿವಾದಿ ಮತ್ತು ಶಾರದಾ ಕೊಪ್ಪದ ರವರ ಮಕ್ಕಳು ಎಂಬ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇದೆ ಎಂದರೆ ಸರಿಯಲ್ಲ. ಸದರಿಯವರು ಈ ದಾವೆಯ ಅವಶ್ಯಕ ಪಕ್ಷಕಾರರಿದ್ದು, ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಅವರ ಮಕ್ಕಳು ಇದ್ದರೂ ಉದ್ದೇಶಪೂರ್ವಕ-ವಾಗಿ ಅವರನ್ನು ಈ ದಾವೆಯಲ್ಲಿ ಪಕ್ಷಕಾರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಪರವಾಗಿ ಅ.ಸಾ.ದಾರ ನಾತೆಯಿಂದ ನನ್ನ ಮಾವ ಸುರೇಶ ರವರು ಸಲ್ಲಿಸಿದ್ದ ದಾವೆಯಲ್ಲಿ ರಾಜೀ ಮಾಡಿಕೊಂಡಿರುವುದರಿಂದ ಮತ್ತು ಸದರಿ ರಾಜಿಯಲ್ಲಿ ನಮ್ಮ ಹಿಸ್ಸೇಯ ಭಾಗವಾಗಿ ರೂ.75000/- ಹಣವನ್ನು ಪಡೆದಕೊಂಡಿರುವುದರಿಂದ ದಾವಾ ಆಸ್ತಿಯಲ್ಲಿ ನನಗಾಗಲೀ ಮತ್ತು 1 ನೇ ವಾದಿಗಾಗಲೀ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿಗಳ ಬಗ್ಗೆ ಸಂಪೂರ್ಣ ನನಗೆ ತಿಳಿದಿದ್ದರೂ, 1 ನೇ ಪ್ರತಿವಾದಿಗೆ ತೊಂದರೆ ನೀಡಲು ದುರುದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

13. ಅಸಲು ದಾವಾ ಸಂಃ 148/2009 ರಲ್ಲಿ ಆದ ರಾಜೀ ಡಿಕ್ರಿಯು ನನಗೆ ಮತ್ತು 1 ನೇ ವಾದಿಗೆ ಬಾಂದಾಯಿಸುತ್ತದೆ ಎಂದರೆ ಸರಿಯಲ್ಲ. ನನ್ನನ್ನು ಮತ್ತು 1 ನೇ ವಾದಿಯನ್ನು ನನ್ನ ಅಜ್ಜಿಯಾದ ಕಮಲಮ್ಮ ರವರು ನೋಡಿಕೊಳ್ಳದೇ ಇದ್ದರೂ ಮತ್ತು ನಿಜವಾಗಿಯೂ ನಮ್ಮ ಮಾವ ಸುರೇಶ ರವರು ನಮ್ಮ ಸಂಪೂರ್ಣ ಆಗು-ಹೋಗುಗಳನ್ನು ನೋಡಿಕೊಂಡಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನಾನು, 1 ನೇ ವಾದಿ ಮತ್ತು ನನ್ನ ಅಜ್ಜಿ ಸುರೇಶ ರವರಿಗೆ ಒತ್ತಾಯಿಸಿ ಮತ್ತು ಮಾಹಿತಿ ನೀಡಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ